**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಟಿ. ಶ್ರೀನಿವಾಸ ಇವರು ನಿಯಮ -72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ವಿಷಯ:-**

ಹಿಂದುಳಿದ ವರ್ಗಗಳ ಎಸ್.ಸಿ, ಎಸ್.ಟಿ ಸಮುದಾಯಗಳಲ್ಲಿಯ ಅಲೆಮಾರಿ, ಅರೆ ಅಲೆಮಾರಿ ಸಮಾಜಗಳಿಗೆ ಸರ್ಕಾರದ ವತಿಯಿಂದ ವಸತಿ (ನಿರ್ಮಿಸಿ) ಯೋಜನೆಯಡಿ ಮನೆಗಳನ್ನು ನಿರ್ಮಿಸುತ್ತಿರುವ ಬಗ್ಗೆ ಮತ್ತು ಮೂಲಸೌಕರ್ಯ ನೀಡುತ್ತಿರುವ ಬಗ್ಗೆ ಮತ್ತು ಅಲೆಮಾರಿ ವಸತಿ ಶಾಲೆಗಳನ್ನು ನಿರ್ಮಿಸುತ್ತಿರುವ ಬಗ್ಗೆ ಚರ್ಚಿಸಲು ಅವಕಾಶವನ್ನು ಕಲ್ಪಿಸುವ ಬಗ್ಗೆ.

ಕರ್ನಾಟಕ ರಾಜ್ಯದಲ್ಲಿರುವಂತಹ 46 ಹಿಂದುಳಿದ ಅಲೆಮಾರಿ ಸಮಾಜಗಳಿಗೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಸಹ ಅವರಿಗೆ ನೆಲೆ ಕಲ್ಪಿಸುವಂತಹ ಮೂಲಭೂತ ಸೌಕರ್ಯ ನಿರ್ಮಿಸುವಂತಹ ಹಾಗೂ ಪ್ರತ್ಯೇಕ ಯೋಜನೆಯನ್ನು ರೂಪಿಸುವ ವಿಚಾರವಾಗಿ ಹಿಂದಿನ 03 ವರ್ಷಗಳಲ್ಲಿ ಎಷ್ಟು ಅನುದಾನವನ್ನು ಆಯವ್ಯಯದಲ್ಲಿ ನಿಗಧಿಪಡಿಸಲಾಗಿದೆ. ಆಯವ್ಯಯ ಯಾವ ಯಾವ ಯೋಜನೆಗಳಿಗೆ ಖರ್ಚು ಮಾಡಲಾಗಿದೆ, ಯಾವ ಯಾವ ಜಿಲ್ಲೆಯಲ್ಲಿ ಎಷ್ಟು, ತಾಲ್ಲೂಕು ಎಷ್ಟು ಎಂಬ ಮಾಹಿತಿಯೊಂದಿಗೆ ನೀಡತಕ್ಕದ್ದು, ರಾಜ್ಯದಲ್ಲಿ ಅಲೆಮಾರಿ ವಸತಿ ಶಾಲೆಗಳನ್ನು ಎಲ್ಲಿ ಪ್ರಾರಂಭಿಸಲಾಗಿದೆ, ಪ್ರಾರಂಭಿಸಿದ್ದರೆ ಜಿಲ್ಲಾ/ತಾಲ್ಲೂಕುವಾರು ಮಾಹಿತಿ. ಅಲೆಮಾರಿ ಹಾಸ್ಟೆಲ್‌ಗಳು ಎಲ್ಲೆಲ್ಲಿ ಪ್ರಾರಂಭಿಸಲಾಗಿದೆ ಎಂಬುದರ ಮಾಹಿತಿ ಸಲ್ಲಿಸುವುದು.

ಅಲೆಮಾರಿಗಳ ಸಮಗ್ರ ಅಭಿವೃದ್ಧಿಗೆ ಪ್ರತ್ಯೇಕ ಯೋಜನೆಗಳನ್ನು ರೂಪಿಸಿದ್ದರೆ ಅದರ ಮಾಹಿತಿ ನೀಡುವುದು. ಅಲೆಮಾರಿ ಆಯೋಗ ರಚಿಸಿದ್ದರೆ ಹಾಗೂ ಅಲೆಮಾರಿ ಕೋಶ ಪ್ರಾರಂಭಿಸಿದ್ದರೆ ಅದರ ಮಾಹಿತಿ ನೀಡುವುದು ಹಾಗೂ ಅನುದಾನ ಮತ್ತು ಖರ್ಚು ವೆಚ್ಚದ ವಿವರ ನೀಡುವುದು. ರಾಜ್ಯದಲ್ಲಿ ಅಲೆಮಾರಿ ಹಿಂದುಳಿದ 46 ಜಾತಿಗಳಲ್ಲಿ ಕುಲಶಾಸ್ತ್ರ, ಅಧ್ಯಯನ ಯಾವ ಸಮಾಜಗಳಿಗೆ ಮಾಡಲಾಗಿದೆ. ಮಾಡಿದ್ದರೆ ವರದಿ ಮತ್ತು ಅದರ ವಿವರಗಳೊಂದಿಗೆ ಸಂಬಂಧಪಟ್ಟ ಸಚಿವರು ಮಾಹಿತಿಯೊಂದಿಗೆ ನಿಯಮ 72 ರಡಿ ಚರ್ಚಿಸಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೋರುತ್ತೇನೆ.

**ಉತ್ತರ:-**

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:-**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಕಇ 97 ಬಿಸಿಎ 2007, ದಿನಾಂಕ:02.06.2007ರಲ್ಲಿ ಅಲೆಮಾರಿ / ಅರೆ-ಅಲೆಮಾರಿ ಜನಾಂಗದವರ ಸರ್ವತೋಮುಖ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಸಲುವಾಗಿ ಒಂದು ಅಲೆಮಾರಿ ಕೋಶವನ್ನು ಸೃಜಿಸಲಾಗಿರುತ್ತದೆ.

ಅಲೆಮಾರಿ / ಅರೆ-ಅಲೆಮಾರಿ ಜನಾಂಗದ ವಸತಿ ರಹಿತರಿಗೆ ಒಂದು ಸ್ಥಳದಲ್ಲಿ ನೆಲೆ ನಿಲ್ಲಲು ಅತೀ ಅಗತ್ಯ ಮೂಲಭೂತ ಸೌಕರ್ಯವಾದ ವಸತಿ ಸೌಲಭ್ಯವನ್ನು ಒದಗಿಸಲು ರೂ.1.20 ಲಕ್ಷಗಳ ಘಟಕ ವೆಚ್ಚದಲ್ಲಿ ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ.

...2..

ಕಳೆದ ಮೂರು ವರ್ಷಗಳಲ್ಲಿ ಅಲೆಮಾರಿ / ಅರೆ-ಅಲೆಮಾರಿ ಸಮುದಾಯದ ಕಾಲೋನಿಗಳ ಅಭಿವೃದ್ಧಿಗೆ ಹಾಗೂ ವಸತಿ ಯೋಜನೆಗೆ ಯಾವುದೇ ಅನುದಾನವನ್ನು ಒದಗಿಸಿರುವುದಿಲ್ಲ.

ಆದರೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ವಸತಿ ಯೋಜನೆಗೆ ಈ ಹಿಂದಿನ ಸಾಲುಗಳಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತದಲ್ಲಿ ಬಾಕಿ ಉಳಿದಿರುವ ಅನುದಾನಕ್ಕನುಗುಣವಾಗಿ 2022-23ನೇ ಸಾಲಿನಲ್ಲಿ 6141 ಮನೆಗಳ ಗುರಿಗೆ ಜಿಲ್ಲಾವಾರು ಗುರಿಯನ್ನು ನಿಗಧಿಪಡಿಸಲಾಗಿರುತ್ತದೆ. ಅದರಂತೆ, ಜಿಲ್ಲೆಗಳಿಂದ 2034 ಪ್ರಸ್ತಾವನೆಗಳನ್ನು ಪಡೆಯಲಾಗಿದ್ದು, ಅರ್ಹ ಫಲಾನುಭವಿಗಳಿಗೆ ಮನೆ ನಿರ್ಮಾಣಕ್ಕೆ ಸಹಾಯಧನವನ್ನು ಬಿಡುಗಡೆ ಮಾಡಲು ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದ ಸಹಯೋಗದೊಂದಿಗೆ ಕ್ರಮವಹಿಸಲಾಗುತ್ತಿದೆ.

**<u>ಅಲೆಮಾರಿ / ಅರೆ-ಅಲೆಮಾರಿ ಜನಾಂಗದ ಅಭಿವೃದ್ಧಿಗಾಗಿ 2022-23, 2023-24 ಮತ್ತು 2024-25ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ವಿವರ:-</u>**

**(ರೂ.ಲಕ್ಷಗಳಲ್ಲಿ)**

| ಕ್ರ ಸಂ. | ಕಾರ್ಯಕ್ರಮಗಳ ವಿವರ | 2022-23 | | 2023-24 | | 2024-25 | |
|---|---|---|---|---|---|---|---|
| | | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ |
| 1 | ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ | 1500.00 | 1146.14 | 970.00 | 944.56 | 960.32 | 813.54 |
| 2 | ಮೆಟ್ರಿಕ್ ನಂತರ ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿವೇತನ | 737.25 | 574.91 | 1530.00 | 1528.01 | 1539.68 | 1428.57 |
| 3 | ಆಶ್ರಮಶಾಲೆಗಳ ನಿರ್ವಹಣೆ | 115.36 | 115.36 | 166.34 | 166.34 | 218.53 | 218.53 |
| 4 | ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶಾವಕಾಶ | 69.18 | 69.18 | 62.53 | 62.53 | 18.20 | 18.20 |
| 5 | ವೇತನ | 107.00 | 107.00 | 115.00 | 115.00 | 169.54 | 169.54 |
| 6 | ಕಚೇರಿ ವೆಚ್ಚ | 15.46 | 15.46 | 21.13 | 21.13 | 13.27 | 13.27 |
| | **ಒಟ್ಟು** | **2544.25** | **2028.05** | **2865.00** | **2837.57** | **2919.54** | **2661.65** |

ಅಲೆಮಾರಿ / ಅರೆ-ಅಲೆಮಾರಿ ಸಮುದಾಯದ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ 1 ರಿಂದ 5ನೇ ತರಗತಿಯವರೆಗೆ ಪ್ರತಿ ಶಾಲೆಗೆ 125 ಸಂಖ್ಯಾಬಲದೊಂದಿಗೆ ಈ ಕೆಳಕಂಡ ಡಿ.ದೇವರಾಜ ಅರಸು ವಸತಿ ಶಾಲೆಗಳನ್ನು ಪ್ರಾರಂಭಿಸಿ ನಿರ್ವಹಣೆ ಮಾಡಲಾಗುತ್ತಿದೆ.

1. ಡಿ.ದೇವರಾಜ ಅರಸು ವಸತಿ ಶಾಲೆ (ಅಲೆಮಾರಿ / ಅರೆ-ಅಲೆಮಾರಿ), ಗೋಕಾಕ್, ಬೆಳಗಾವಿ ಜಿಲ್ಲೆ.
2. ಡಿ.ದೇವರಾಜ ಅರಸು ವಸತಿ ಶಾಲೆ (ಅಲೆಮಾರಿ / ಅರೆ-ಅಲೆಮಾರಿ), ತಾವರಗೇರಾ, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ.
3. ಡಿ.ದೇವರಾಜ ಅರಸು ವಸತಿ ಶಾಲೆ (ಅಲೆಮಾರಿ / ಅರೆ-ಅಲೆಮಾರಿ), ರಾಜಾಜಿನಗರ, ಬೀರೂರು, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
4. ಡಿ.ದೇವರಾಜ ಅರಸು ವಸತಿ ಶಾಲೆ (ಅಲೆಮಾರಿ / ಅರೆ-ಅಲೆಮಾರಿ), ಆಳಂದ ಚೆಕ್‌ಪೋಸ್ಟ್ ಕಲಬುರಗಿ ಜಿಲ್ಲೆ.

ಮುಂದುವರೆದು, 2025-26ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-202ರ ಘೋಷಣೆಯಂತೆ, ಸರ್ಕಾರದ ಆದೇಶ ಸಂಖ್ಯೆ:ಹಿಂವಕ 415 ಬಿಎಂಎಸ್ 2025, ದಿನಾಂಕ: 18-06-2025 ಮತ್ತು ತಿದ್ದುಪಡಿ ಆದೇಶ ದಿನಾಂಕ:10-07-2025ರಲ್ಲಿ ಅಲೆಮಾರಿ / ಅರೆ-ಅಲೆಮಾರಿ ಜನಾಂಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ರಾಜ್ಯದ 4 ಕಂದಾಯ ವಿಭಾಗಗಳಲ್ಲಿ ತಲಾ ಒಂದರಂತೆ 6 ರಿಂದ 12ನೇ ತರಗತಿಯವರೆಗೆ ಪ್ರತಿ ಶಾಲೆಗೆ 420 ಸಂಖ್ಯಾಬಲದೊಂದಿಗೆ ಡಿ.ದೇವರಾಜ ಅರಸು ವಸತಿ ಶಾಲೆಗಳನ್ನು ಈ ಕೆಳಕಂಡ ಕಂದಾಯ ವಿಭಾಗಗಳಲ್ಲಿ ಕ್ರೈಸ್ ವತಿಯಿಂದ ಪ್ರಾರಂಭಿಸಲು ಆದೇಶಿಸಲಾಗಿರುತ್ತದೆ.

1. ಮೈಸೂರು
2. ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನ ಕೌಜಲಗಿ ಹೋಬಳಿಯ ಬಿಲಕುಂದಿ ಗ್ರಾಮ.
3. ತುಮಕೂರು ಜಿಲ್ಲೆ ಶಿರಾ.
4. ಕೊಪ್ಪಳ ಜಿಲ್ಲೆಯ ಕಾರಟಗಿ.

2025-26ನೇ ಸಾಲಿನ ಆಯವ್ಯಯ ಕಂಡಿಕೆ-206ರ ಘೋಷಣೆಯಲ್ಲಿ ಅಲೆಮಾರಿ ಮತ್ತು ಅರೆ-ಅಲೆಮಾರಿ ಜನಾಂಗದವರ ಕಾಲೋನಿಗಳ ಸಮಗ್ರ ಅಭಿವೃದ್ಧಿಗಾಗಿ ರೂ.100.00 ಕೋಟಿಗಳ ಅನುದಾನವನ್ನು ಒದಗಿಸಲಾಗುವುದೆಂದು ಘೋಷಿಸಲಾಗಿರುತ್ತದೆ. ಅದರಂತೆ, ಸರ್ಕಾರದ ಆದೇಶ ಸಂಖ್ಯೆ: ಹಿಂವಕ 602 ಬಿಎಂಎಸ್ 2025, ದಿನಾಂಕ:31-07-2025ನ್ನು ಹೊರಡಿಸಿದ್ದು, ಸದರಿ ಆದೇಶದಲ್ಲಿ ಪ್ರಸಕ್ತ ಸಾಲಿನಲ್ಲಿ ರೂ.30.00 ಕೋಟಿ ಅನುದಾನ ಒದಗಿಸಿದ್ದು, ಒದಗಿಸಿರುವ ಅನುದಾನಕ್ಕೆ ಸೀಮಿತವಾಗಿ ಅಲೆಮಾರಿ / ಅರೆ-ಅಲೆಮಾರಿ ಕಾಲೋನಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸೂಚಿಸಲಾಗಿರುತ್ತದೆ ಹಾಗೂ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು / ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಅಲೆಮಾರಿ ಕಾಲೋನಿಗಳಿಗೆ ಭೇಟಿ ನೀಡಿ ಸಮೀಕ್ಷೆ ನಡೆಸಿ ಮಾಹಿತಿ ಸಲ್ಲಿಸಲು ಆದೇಶಿಸಲಾಗಿರುತ್ತದೆ. ಅದರಂತೆ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು / ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಂದ ಮಾಹಿತಿ ಪಡೆಯಲು ಕ್ರಮವಹಿಸಲಾಗಿದ್ದು, ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಹಂತ-ಹಂತವಾಗಿ ಕಲ್ಪಿಸಲು ಕ್ರಮವಹಿಸಲಾಗುವುದು.

2024-25ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-182ರ ಘೋಷಣೆಯಂತೆ, ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ:30.03.2002ರನ್ವಯ ಹಿಂದುಳಿದ ವರ್ಗಗಳ ಪ್ರವರ್ಗ-1ರಲ್ಲಿ ಬರುವ ಮತ್ತು ಸರ್ಕಾರದ ಆದೇಶ ಸಂಖ್ಯೆ: ಪಿಹೆಚ್ಎಸ್ 262 ಎಸ್ಇಡಬ್ಲ್ಯೂ 65, ದಿನಾಂಕ 01.02.1966ರಲ್ಲಿ ಅಲೆಮಾರಿ / ಅರೆ-ಅಲೆಮಾರಿ ಜಾತಿಗಳೆಂದು ಗುರುತಿಸಲ್ಪಟ್ಟಿರುವ 46 ಸಮುದಾಯಗಳ ಸರ್ವತೋಮುಖ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಲು, ಶೈಕ್ಷಣಿಕ, ಉದ್ಯೋಗ ಮೀಸಲಾತಿಗಾಗಿ ಅಲೆಮಾರಿ / ಅರೆ-ಅಲೆಮಾರಿ ಸಮುದಾಯಗಳ ಪಟ್ಟಿಯನ್ನು ಗುರುತಿಸುವುದು ಹಾಗೂ ಮುಂತಾದ ಕಾರ್ಯಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ:ಹಿಂವಕ 149 ಬಿಸಿಎ 2024, ದಿನಾಂಕ: 15.06.2024ರಲ್ಲಿ "ಕರ್ನಾಟಕ ರಾಜ್ಯ ಅಲೆಮಾರಿ / ಅರೆ-ಅಲೆಮಾರಿ ಆಯೋಗ"ವನ್ನು ರಚಿಸಿ ಆದೇಶಿಸಲಾಗಿರುತ್ತದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಕರ್ನಾಟಕ ರಾಜ್ಯ ಅಲೆಮಾರಿ/ಅರೆ-ಅಲೆಮಾರಿ ಆಯೋಗವನ್ನು ರಚಿಸಿರುವುದರಿಂದ, ಪರಿಶಿಷ್ಟ ಜಾತಿ / ಪಂಗಡ ಹಾಗೂ ಅಲ್ಪಸಂಖ್ಯಾತರಿಗೆ ಸೇರಿದ ಅಲೆಮಾರಿ / ಅರೆ-ಅಲೆಮಾರಿ ಸಮುದಾಯಗಳನ್ನು ಆಯೋಗದ ವ್ಯಾಪ್ತಿಗೆ ತರುವ ಬಗ್ಗೆ ಅಭಿಪ್ರಾಯ ನೀಡಲು ಸೂಚಿಸಲಾಗಿತ್ತು. ಈ ಬಗ್ಗೆ ಎಲ್ಲಾ ಅಲೆಮಾರಿ / ಅರೆ-ಅಲೆಮಾರಿ ಸಮುದಾಯಗಳ ಸಮಗ್ರ ಅಧ್ಯಯನದ ಅವಶ್ಯವಿದ್ದು, ಪರಿಶಿಷ್ಟ ಜಾತಿ / ಪಂಗಡ ಹಾಗೂ ಅಲ್ಪಸಂಖ್ಯಾತರಿಗೆ ಸೇರಿದ ಅಲೆಮಾರಿ / ಅರೆ-ಅಲೆಮಾರಿ ಸಮುದಾಯಗಳನ್ನು ಆಯೋಗದ ವ್ಯಾಪ್ತಿಗೆ ತರುವುದು ಸೂಕ್ತ ಎಂದು ಅಭಿಪ್ರಾಯವನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಸದರಿ ವಿಷಯವು ಪರಿಶೀಲನೆಯಲ್ಲಿರುತ್ತದೆ.

2024-25ನೇ ಸಾಲಿನಲ್ಲಿ ಡಿ.ದೇವರಾಜ ಅರಸು ಸಂಶೋಧನಾ ಸಂಸ್ಥೆಯ ವತಿಯಿಂದ ಈ ಕೆಳಕಂಡ ಅಲೆಮಾರಿ / ಅರೆ-ಅಲೆಮಾರಿ ಜನಾಂಗಗಳ ಕುಲಶಾಸ್ತ್ರೀಯ ಅಧ್ಯಯನಗಳನ್ನು ಕೈಗೊಳ್ಳಲಾಗಿದ್ದು, ಅಧ್ಯಯನಗಳು ಪ್ರಗತಿಯಲ್ಲಿರುತ್ತವೆ.

| ಕ್ರ ಸಂ. | ಜನಾಂಗಗಳ ಹೆಸರು | ವಿಶ್ವವಿದ್ಯಾಲಯಗಳ ಸಹಯೋಗ |
|---|---|---|
| 1. | ಶಿಕ್ಕಲಿಗರ್ | ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ಶಿಗ್ಗಾವಿ, ಹಾವೇರಿ ಜಿಲ್ಲೆ |
| 2. | ಘೀಸಾಡಿ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ |
| 3. | ಬಾಜಿಗರ್ | ವಿಜಯನಗರ ಶ್ರೀ ಕೃಷ್ಣ ದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ |
| 4. | ಗೋಪಾಲ್ | ಮೈಸೂರು ವಿಶ್ವವಿದ್ಯಾಲಯ |
| 5. | ಬೈಲುಪತ್ತಾರ್ | ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಬೆಂಗಳೂರು |
| 6. | ಗಾರುಡಿಗ | ತುಮಕೂರು ವಿಶ್ವವಿದ್ಯಾಲಯ |
| 7. | ನಂದಿವಾಲ-ಜೋಷಿ- | ತುಮಕೂರು ವಿಶ್ವವಿದ್ಯಾಲಯ |
| 8. | ಹಾವಾಡಿಗ | ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಬೆಂಗಳೂರು |

## ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ

ಪರಿಶಿಷ್ಟ ಜಾತಿ ಅಲೆಮಾರಿ, ಅರೆ-ಅಲೆಮಾರಿ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯಗಳ ಕೋಶವನ್ನು ಸರ್ಕಾರದ ಆದೇಶ ಸಂಖ್ಯೆ: ಸಕಇ 10 ಎಸ್‌ಎಲ್‌ಪಿ 2015, ದಿನಾಂಕ:12.01.2016 ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಕಇ 197 ಎಸ್‌ಎಲ್‌ಪಿ 2017, ದಿನಾಂಕ:24.05.2017ರ ಪ್ರಕಾರ ಅಲೆಮಾರಿ ಕೋಶವನ್ನು ಸ್ಥಾಪಿಸಲಾಗಿರುತ್ತದೆ.

ಮುಂದುವರೆದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದವರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಅಲೆಮಾರಿ ಕೋಶವನ್ನು ಸರ್ಕಾರದ ಆದೇಶ ಸಂಖ್ಯೆ: ಸಕಇ 90 ಎಸ್‌ಡಿಸಿ 2021, ದಿನಾಂಕ:17.12.2022ರಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮವನ್ನು ನೂತನವಾಗಿ ಸ್ಥಾಪಿಸಿ ಆದೇಶಿಸಲಾಗಿರುತ್ತದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯಗಳ ಸಮಗ್ರ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ.

- ಸ್ವಯಂ ಉದ್ಯೋಗ (ನೇರ ಸಾಲ)
- ಉದ್ಯಮ ಶೀಲತಾ ಯೋಜನೆ (ಘ.ವೆ ರೂ.2.00 ಲಕ್ಷ)
- ಸ್ವಾವಲಂಭಿ ಸಾರಥಿ ಯೋಜನೆ (ಘ.ವೆ ರೂ.4.00 ಲಕ್ಷ)
- ಮೈಕ್ರೋ ಕ್ರೆಡಿಟ್ ಯೋಜನೆ
- ಭೂ ಒಡೆತನ ಯೋಜನೆ
- ಗಂಗಾ ಕಲ್ಯಾಣ ಯೋಜನೆ

ವಸತಿ ಯೋಜನೆ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದವರಿಗೆ ವಸತಿ ಸೌಕರ್ಯವನ್ನು ಕಲ್ಪಿಸಲು ಡಾ.ಬಿ.ಆರ್. ಅಂಬೇಡ್ಕರ ವಸತಿ ಯೋಜನೆ (ಗ್ರಾಮೀಣ/ನಗರ) ಯಡಿ ಪರಿಶಿಷ್ಟ ಜಾತಿ 4525 ಪರಿಶಿಷ್ಟ ಪಂಗಡ 1483 ಒಟ್ಟು 6008 ಮತ್ತು ಹೆಚ್ಚುವರಿಯಾಗಿ 4305 ಮನೆಗಳಿಗೆ ಸರ್ಕಾರದಿಂದ ಮಂಜೂರು ಮಾಡಿ ಒಟ್ಟು 10313 ಗುರಿ ನಿಗಧಿಪಡಿಸಿ ಆದೇಶಿಸಲಾಗಿರುತ್ತದೆ, ಅದರಂತೆ ಇದುವರೆಗೂ ನಿಗಮದಿಂದ 5226 ಫಲಾನುಭವಿಗಳಿಗೆ ಅನುಮೋದಿಸಲಾಗಿರುತ್ತದೆ.

ಸದರಿ ವಸತಿ ಯೋಜನೆಯನ್ನು ವಸತಿ ಇಲಾಖೆಯಡಿ ಬರುವ ರಾಜೀವ್ ಗಾಂಧಿ ವಸತಿ ನಿಗಮದಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಇವುಗಳಲ್ಲಿ 3236 ಮನೆಗಳು ಪೂರ್ಣ ಗೊಂಡಿರುತ್ತವೆ. ಬಾಕಿ ಉಳಿದ 1990 ಮನೆಗಳು ಪ್ರಗತಿಯಲ್ಲಿರುತ್ತವೆ. ಮುಂದುವರೆದು, ಬಾಕಿ ಉಳಿದ 5087 ಗುರಿಗಳನ್ನು ಆದೇಶ ಸಂಖ್ಯೆ:ವಇ 179 ಹೆಚ್‌ಎಹೆಚ್ 2024, ದಿನಾಂಕ: 25.04.2025ರಲ್ಲಿ ಸರ್ಕಾರದ ವಸತಿ ಇಲಾಖೆಯಿಂದ ಹಿಂಪಡೆದು ಆದೇಶ ಹೊರಡಿಸಲಾಗಿರುತ್ತದೆ.

ಕಳೆದ 03 ವರ್ಷಗಳಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ಅನುದಾನವನ್ನು ನಿಗಧಿಪಡಿಸಲಾಗಿರುವ ವಿವರ ಈ ಕೆಳಕಂಡಂತಿರುತ್ತದೆ.

**(ಪರಿಶಿಷ್ಟ ಜಾತಿ)** **(ರೂ.ಕೋಟಿಗಳಲ್ಲಿ)**

| ಕ್ರ.ಸಂ | ವರ್ಷ | ಆಯ್ಯವ್ಯಯದಲ್ಲಿ ಒದಗಿಸಲಾದ ಅನುದಾನ | ವೆಚ್ಚ |
|---|---|---|---|
| 1 | 2022-23 | 50.00 | 3.76 |
| 2 | 2023-24 | 42.50 | 73.88 |
| 3 | 2024-25 | 35.00 | 44.01 |
| ಒಟ್ಟು | | **127.50** | **121.65** |

**(ಪರಿಶಿಷ್ಟ ಪಂಗಡ)** **(ರೂ.ಕೋಟಿಗಳಲ್ಲಿ)**

| ಕ್ರ.ಸಂ | ವರ್ಷ | ಆಯ್ಯವ್ಯಯದಲ್ಲಿ ಒದಗಿಸಲಾದ ಅನುದಾನ | ವೆಚ್ಚ |
|---|---|---|---|
| 1 | 2022-23 | 24.74 | 22.99 |
| 2 | 2023-24 | 33.50 | 25.85 |
| 3 | 2024-25 | 35.00 | 24.64 |
| ಒಟ್ಟು | | **93.24** | **73.48** |

ಮುಂದುವರೆದು, ಪರಿಶಿಷ್ಟ ಜಾತಿ ಅಲೆಮಾರಿ ಸಮುದಾಯಗಳಲ್ಲಿ ಒಟ್ಟು 51 ಸಮುದಾಯಗಳಿದ್ದು, ಅದರಲ್ಲಿ 47 ಅಲೆಮಾರಿ ಸಮುದಾಯದವರ ಕುಲಶಾಸ್ತ್ರೀಯ ಅಧ್ಯಯನವನ್ನು ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ ಇವರಿಂದ ಮಾಡಲಾಗಿರುತ್ತದೆ.

ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದ 23 ಸಮುದಾಯಗಳು ಹಾಗೂ ಪರಿಶಿಷ್ಟ ಪಂಗಡಗಳ ಅರಣ್ಯ ಆದಿವಾಸಿಗಳಲ್ಲಿ 25 ಸೇರಿ ಒಟ್ಟು 48 ಸಮುದಾಯಗಳ ಪೈಕಿ 11 ಸಮುದಾಯದವರ ಕುಲಶಾಸ್ತ್ರೀಯ ಅಧ್ಯಯನವನ್ನು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ರವರಿಂದ ಮಾಡಲಾಗಿರುತ್ತದೆ.

ಸಂಖ್ಯೆ: ಹಿಂವಕ 926 ಬಿಎಂಎಸ್ 2025

(ಶಿವರಾಜ ಎಸ್.ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.